

# ಗಿನ್ನೆಸ್ ಪದಬಂಧ

ಕೊಟ್ಟಿರುವ ಸುಳಿವು (ಕ್ಲೂ) ಗಳನ್ನಾಧರಿಸಿ ಸೂಕ್ತ ಪದಗಳನ್ನು ಎಡದಿಂದ ಬಲಕ್ಕೆ ಅಥವಾ ಮೇಲಿಂದ ಕೆಳಕ್ಕೆ ಇರುವ ಖಾಲಿ ಮನೆಗಳಲ್ಲಿ ತುಂಬುವ ಪದಬಂಧ ಯಾರಿಗೆ ಗೊತ್ತಿಲ್ಲ ಹೇಳಿ? ವಿಶ್ವದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ನಿತ್ಯ ಪ್ರಕಟವಾಗುವ ಪದಬಂಧಕ್ಕೆ ಹಲವಾರು ವರ್ಷಗಳ ಇತಿಹಾಸವೇ ಇದೆ. ಪದಬಂಧವನ್ನು ಮೊಟ್ಟ ಮೊದಲನೆಯದಾಗಿ ಅರ್ಥರ್ ವ್ಯಾನೆ ಎಂಬಾತ ರಚಿಸಿದ. ಇಂದು ಪದಬಂಧ ಪ್ರಕಟಿಸದ ಪತ್ರಿಕೆಯೇ ಇಲ್ಲ ಎಂದು ಹೇಳಬಹುದು.

ಅಂತೆಯೇ ಪ್ರಪಂಚದಾದ್ಯಂತ ಪದಬಂಧ ಪ್ರಿಯರಿದ್ದಾರೆ. ಕೆಲವರಿಗೆ ಪದಬಂಧ ತುಂಬಲು ಕೆಲವೇ ನಿಮಿಷಗಳು ಸಾಕು, ಆದರೆ ಇನ್ನು ಕೆಲವರಿಗೆ ಹಲವು ಗಂಟೆಗಳು ಬೇಕಾದರೆ ಮತ್ತೂ ಕೆಲವರಿಗೆ ದಿನಗಳೇ ಬೇಕಾಗುತ್ತದೆ. ಆದರೆ ಪೂರ್ತಿಯಾಗಿ ಪದಬಂಧವನ್ನು ತುಂಬಲು ವರ್ಷವೇ ಬೇಕಾಗುವಂಥ ಅತೀ ದೊಡ್ಡದಾದ ಪದಬಂಧದ ಗ್ರಿಡ್ ಇಲ್ಲಿದೆ. ಬಲಿಷ್ಠವಾದ ಒರಟು ಕಾಗದದಲ್ಲಿರುವ ಇದನ್ನು ನೀವು ಗೋಡೆಗೆ ತೂಗು ಹಾಕಬೇಕು ಇಲ್ಲವೇ ನೆಲದ ಮೇಲೆ ಹರಡಬೇಕು ಯಾಕೆಂದರೆ ಇದು 7x7 ಅಡಿಗಳಷ್ಟು ದೊಡ್ಡದಿದೆ. ಇದರಲ್ಲಿ ಬರೊಬ್ಬರಿ 91,000 ಕಪ್ಪು ಬಿಳಿ ಚೌಕದ ಮನೆಗಳಿವೆ. ಇದನ್ನು ಬಿಡಿಸಲು ಬೇಕಾದ ಕ್ಲೂ (ಸುಳಿವು)ಗಳ ಸಂಖ್ಯೆ 28,000. ಈ ಸುಳುಹುಗಳನ್ನೊಳಗೊಂಡ ಪುಸ್ತಕವೇ ಸುಮಾರು 100 ಪುಟಗಳಷ್ಟು ದೊಡ್ಡದಿದೆ. ಅಂತೆಯೇ ಇದು 1996 ರಲ್ಲಿ ಅತೀ ದೊಡ್ಡ ಪದಬಂಧ ಎಂಬ ಗಿನ್ನೆಸ್ ದಾಖಲೆಯನ್ನು ಸೇರಿದೆ.

■ **ವಿದ್ಯಾ ವಿ. ಹಾಲಭಾವಿ**

